ಕರ್ನಾಟಕ ಆಯಿಲ್ ಪೆಡರೇಷನ್ ಬಗ್ಗೆ

೧೩೧೪ (೨೪೪೭) ಶ್ರೀ ಆರ್. ಪೆಂಕಟರಾಮಯ್ಯ (ಮುಳಬಾಗಿಲು)—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಕರ್ನಾಟಕ ಎಣ್ಣೆ ಬೀಜ ಉತ್ಪಾದಕರ ಮಹಾ ಮಂಡಲಿಯ ಕಾರ್ಯ ವ್ಯಾಪ್ತಿಯೇನು ?

ಆ) ಸದರಿ ಮಂಡಳಿಯು ಎಲ್ಲೆಲ್ಲಿ ಕಾರ್ಯಾರಂಭವನ್ನು ಮಾಡಲಾಗಿದೆ ?

ಇ) ಈ ಮಂಡಳಿಯ ಮೂಲ ಬಂಡವಾಳವೆಷ್ಟು. ಹಾಗೂ ಇದರ ಸಾದನೆ ಮತ್ತು ಗುರಿಗಳೇನು ?

ಈ) ಕೋಲಾರ ಜಿಲ್ಲೆಯಲ್ಲಿ ಕಾರ್ಯಾರಂಭವನ್ನು ಪ್ರಾರಂಭಿಸುವುದು ಯಾವಾಗ ?

ಶ್ರೀ ಹೆಚ್. ಏಕಾಂತಯ್ಯ (ಸಹಕಾರ ಮಂತ್ರಿಗಳು).—

ಅ) ಮತ್ತು ಆ)

ಕರ್ನಾಟಕ ಸಹಕಾರಿ ಎಣ್ಣೆ ಕಾಳು ಬೆಳೆಗಾರರ ಮಹಾಮಂಡಳಿಯ ಕಾರ್ಯ ವ್ಯಾಪ್ತಿಯು ರಾಜ್ಯದ ಈ ಕೆಳಗಿನ ೬ ಜಿಲ್ಲೆಗಳಿಗೆ ವ್ಯಾಪಿಸಿದ್ದು ಸದ್ಯ ಈ ಜಿಲ್ಲೆಗಳ ೩೩ ತಾಲ್ಲೂಕುಗಳಲ್ಲಿ ಮಂಡಳಿಯು ಕಾರ್ಯನಿರ್ವಹಿಸುತ್ತಿರುತ್ತದೆ.

೧)	ರಾಯಚೂರು	—	೮ ತಾಲ್ಲೂಕುಗಳು
೨)	ಧಾರವಾಡ	—	೭ ತಾಲ್ಲೂಕುಗಳು
೩)	ಬಳ್ಳಾರಿ	—	೫ ತಾಲ್ಲೂಕುಗಳು
೪)	ಚಿತ್ರದುರ್ಗ	—	೭ ತಾಲ್ಲೂಕುಗಳು
೫)	ಗುಲ್ಬರ್ಗ	—	೩ ತಾಲ್ಲೂಕುಗಳು
೬)	ಬಿಜಾಪುರ	—	೩ ತಾಲ್ಲೂಕುಗಳು

ಇ) ಮಂಡಳಿಯ ಮೂಲ ಬಂಡವಾಳ ರೂ. ೫.೦೦ ಕೋಟಿಗಳಿದ್ದು, ಅದಗಲ್ಲಿ ಪಾವತಿಯಾದ ಬಂಡವಾಳವು ರೂ. ೧.೦೯ ಕೋಟಿಗಳಾಗಿರುತ್ತದೆ.

ಗುರಿ: (ಅ) ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಸಂಘಟನೆ,

(ಬ) ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳ ಮೂಲಕ ಎಣ್ಣೆ ಬೀಜಗಳ ಖರೀದಿ ಮಾಡುವುದು,

(ಸಿ) ಎಣ್ಣೆ ಬೀಜ ಬೆಳೆಗಾರರಿಗೆ ತಾಂತ್ರಿಕ ಸಲಹೆ ನೀಡುವುದು,

(ಡಿ) ಸಂಘಗಳ ಮುಖೇನ ತಾಂತ್ರಿಕ ಸಾಮಾಗ್ರಿಗಳ ಸರಬರಾಜು,

(ಇ) ಎಣ್ಣೆ ಮತ್ತು ಹಿಂಡಿ ಉತ್ಪಾದನೆ.

ಸಾಧನೆ:—

೧೯೮೮ ಜೂನ್ ೧ ರವರೆಗೆ ಒಟ್ಟು ೨೨೮ ಎಣ್ಣೆ ಬೀಜ ಬೆಳೆಗಾರರ ಸಹಕಾರ ಸಂಘಗಳು ಸ್ಥಾಪನೆಯಾಗಿದ್ದು ಅವುಗಳು ಒಟ್ಟು ೫೩. ೪೭೮ ಸದಸ್ಯರನ್ನು ಹೊಂದಿರುತ್ತೆ.

ತಾಂತ್ರಿಕ ಸಾಮಾಗ್ರಿಗಳ ಸರಬರಾಜು	ಮುಂಗಾರು ೮೭	ಹಿಂಗಾರು ೮೭–೮೮
೧) ಬೀಜಗಳು	೪೪೩ ಎಂ. ಟಿ.	೮೧೨ ಎಂ. ಟಿ.
೨) ಗೊಬ್ಬರ	೩೨೪೨ ಎಂ. ಟಿ.	೪೩೭೩ ಎಂ. ಟಿ.
೩) ಜಿಪ್ಸಂ	೬೪೧ ಎಂ. ಟಿ.	೩೯೧೩ ಎಂ. ಟಿ.
೪) ಕೀಟನಾಶಕ ಔಷಧಿ	೩೪೦೭ ಲೀಟರ್	೩೪೫೩ ಲೀಟರ್.

೫)	ರೈಜೋಬಿಯಂ	೬೯೦ ಕೆ. ಜಿ.	೩೧೬೧ ಕೆ. ಜಿ.
೬)	ಬೀಜೋಪಚಾರಕ ಔಷಧಿ	೭೭೮ ಕೆ. ಜಿ.	೨೫೯೪ ಕೆ. ಜಿ.
೭)	ಸಸ್ಯ ಸಂರಕ್ಷಣ ಉಪಕರಣ	೪೭೬೩	೧೯೮೭–೮೮ ರಲ್ಲಿ ಸದಸ್ಯರಿಗೆ ಸರಬರಾಜು ಮಾಡಿರುವುದು.
೮)	ಕೃಷಿ ಉಪಕರಣ	೧೨೦೫	
೯)	ಸೀಪರಣಾ ಉಪಕರಣ	೧೫	

ಪ್ರಾತ್ಯಕ್ಷತೆಗಳು:	ಮುಂಗಾರು ೮೭	ಹಿಂಗಾರು ೮೭–೮೮
	೧೧೬	೨೧೪
ಎಣ್ಣೆ ಬೀಜಗಳ ಬಿರೀದಿ	ಮುಂಗಾರು	ಹಿಂಗಾರು
ಶೇಂಗಾ	೧೧, ೩೩೧ ಎಂ. ಟಿ.	೮, ೯೯೬ ಎಂ. ಟಿ.
ಸೂರ್ಯಕಾಂತಿ	೧೦, ೩೪೧ ಎಂ. ಟಿ.	೭೨೫ ಎಂ. ಟಿ.
ಕುಸುಬೆ	—	೩೪೫ ಎಂ. ಟಿ.
ಎಳ್ಳು	೯೨ ಎಂ. ಟಿ.	—

ಎಣ್ಣೆ ಉತ್ಪಾದನೆ ೧೯೮೭–೮೮ನೇ ಸಾಲಿನಲ್ಲಿ ೨, ೨೮೨ ಎಂ. ಟಿ.

ಹಿಂಡಿ ಉತ್ಪಾದನೆ ೧೯೮೭–೮೮ನೇ ಸಾಲಿನಲ್ಲಿ ೨, ೮೪೦ ಎಂ. ಟಿ.

ಈ) ಕೋಲಾರ ಜಿಲ್ಲೆಯು ಪ್ರಸ್ತಾವಿತ ಯೋಜನೆಯಡಿಯಲ್ಲಿ ಸೇರಿರುವುದಿಲ್ಲ. ಯೋಜನೆಯನ್ನು ವಿಸ್ತರಿಸುವ ಬಗ್ಗೆ ಪ್ರಸಕ್ತ ಮುಂಡಳಿ ಹಾಗೂ ರಾಷ್ಟ್ರೀಯ ಹೈನುಗಾರಿಕಾ ಅಭಿವೃದ್ಧಿ ಮಂಡಳಿಯು ಮುಂದೆ ಚರ್ಚೆಗಳು ನಡೆಯುತ್ತಿವೆ.

ರಾಜ್ಯದಲ್ಲಿರುವ ರೆಗ್ಯುಲೇಟೆಡ್ ಮಾರ್ಕೆಟ್‌ಗಳು

೧೩೧೫(೨೪೪೬) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿರುವ ನಿಯಂತ್ರಿತ ಮಾರುಕಟ್ಟೆ ಆಂಗಣಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಮಾರ್ಕೆಟ್‌ಗಳಿಂದ ರಾಜ್ಯ ಬೊಕ್ಕಸಕ್ಕೆ ಬರುವ ಕಮಿಶನ್ ಎಷ್ಟು?

ಇ) ನಿಯಂತ್ರಿತ ಮತ್ತು ರೇಷ್ಮೆ ಮಾರ್ಕೆಟ್‌ಗಳ ರೀತಿಯಲ್ಲಿ ತರಕಾರಿ ಮತ್ತು ಹಣ್ಣುಗಳ ಮಾರ್ಕೆಟ್ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ?

ಈ) ಹಾಗಿದ್ದಲ್ಲಿ ಸದರಿ ಮಾರುಕಟ್ಟೆಗಳನ್ನು ಅನುಷ್ಠಾನಕ್ಕೆ ಯಾವಾಗ ತರಲಾಗುವುದು?

ಉ) ಕಳೆದ ಮೂರು ವರ್ಷಗಳಲ್ಲಿ ಪ್ರಾರಂಭಿಸಿರುವ ಮಾರುಕಟ್ಟೆಗಳ ಸಂಖ್ಯೆ ಎಷ್ಟು? (ಜಿಲ್ಲಾವಾರು ಮತ್ತು ವರ್ಷವಾರು ವಿವರ ನೀಡುವುದು)

ಊ) ರಾಜ್ಯದಲ್ಲಿ ಹೊಸದಾಗಿ ನಿರ್ಮಿಸಿರುವ ಆಂಗಣಗಳ ಸಂಖ್ಯೆ ಎಷ್ಟು ಮತ್ತು ಅದರ ವೆಚ್ಚ ಎಷ್ಟು?

ಶ್ರೀ ಹೆಚ್. ವಿಶ್ವಾಂತಯ್ಯ (ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿ ೧೧೬ ಮಾರುಕಟ್ಟೆ ಸಮಿತಿಗಳಿವೆ. ಈ ಪೈಕಿ ೭೬ ಮಾರುಕಟ್ಟೆ ಸಮಿತಿಗಳು ಸ್ವಂತ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಿ ವ್ಯಾಪಾರವನ್ನು ಸ್ಥಳಾಂತರಿಸಿವೆ. ೩೧ ಮಾರುಕಟ್ಟೆ ಸಮಿತಿಗಳು ತಮ್ಮ ಸ್ವಂತ ಮಾರುಕಟ್ಟೆ ಪ್ರಾಂಗಣಗಳನ್ನು ಅಭಿವೃದ್ಧಿ ಪಡಿಸಲು ಭೂಮಿಯನ್ನು ಖರೀದಿಸಿದ್ದು ಅಭಿವೃದ್ಧಿ ಕೆಲಸಗಳನ್ನು ತ್ವರಿತದಿಂದ ಮಾಡಲಾಗುತ್ತಿದೆ. ಉಳಿದ ೯ ಮಾರುಕಟ್ಟೆ ಸಮಿತಿಗಳಲ್ಲಿ ಸ್ವಂತ ಪ್ರಾಂಗಣಕ್ಕಾಗಿ ಜಮೀನು ಇಲ್ಲದಿರುವುದರಿಂದ ಭೂ ಸ್ವಾಧೀನ ಕ್ರಮಗಳನ್ನು ಕೈಗೊಂಡಿದೆ. (ಜಿಲ್ಲಾವಾರು ವಿವರಗಳನ್ನು ಅನುಬಂಧ-೧ ರಲ್ಲಿ ನೀಡಲಾಗಿದೆ)